**I ನೇ ಹೆಚ್ಚುವರಿ ನ್ಯಾಯಾಲಯ ಹಾಗೂ ಜೆ ಎಮ್ ಎಫ್ ಸಿ, ಬೆಳಗಾವಿ**

**O.S.No.**1316/2014

**DW**-3

**ಪ್ರಮಾಣ ವಚನ ಬೋಧಿಸಿದ ದಿನಾಂಕಃ** 18-02-2019.

**ಮುಖ್ಯ ವಿಚಾರಣೆ ಪ್ರತಿವಾದಿ ಪರ ವಕೀಲರು ಶ್ರೀ ಆರ್ ಕೆ ಪಿ ರವರಿಂದ**

ನನ್ನ ಮುಖ್ಯ ವಿಚಾರಣೆ ಸಲುವಾಗಿ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿರುವ ಎಲ್ಲ ಅಂಶಗಳು ಸತ್ಯವಾಗಿರುತ್ತದೆ.

**ಪಾಟೀ ಸವಾಲು ವಾದಿ ಪರ ವಕೀಲರಾದ ಶ್ರೀ ಆರ್ ಎ ಸಿ ರವರಿಂದ** -

1. ನಾನು 4 ನೇ ತರಗತಿಯವರೆಗೆ ಮಾರಾಠಿ ಮಾಧ್ಯಮದಲ್ಲಿ ಓದಿರುತ್ತೇನೆ. ನಾನು ಜಾಫರವಾಡಿ ಗ್ರಾಮದಲ್ಲಿ ವಾಸವಾಗಿದ್ದೇನೆ. ಈ ಕೇಸಿನಲ್ಲಿ ಸಾಕ್ಷಿ ಹೇಳುವಂತೆ ನನಗೆ ಸಮನ್ಸ ಬಂದಿರುವುದಿಲ್ಲ. ಈ ಕೇಸಿನಲ್ಲಿ ಸಾಕ್ಷಿ ಹೇಳಲು ನನ್ನನ್ನು 5 ನೇ ಪ್ರತಿವಾದಿ ಕರೆದಿರುತ್ತಾರೆ. ನಾನು ಮತ್ತು 5 ನೇ ಪ್ರತಿವಾದಿ ಸ್ನೇಹಿತರು ಎಂದರೆ ಸರಿ . ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂಬ ಬಗ್ಗೆ, ನನಗೆ ಮಾಹಿತಿ ಇರುವುದಿಲ್ಲ. ನನಗೆ ಇಂಗ್ಲೀಷ ಓದಲು , ಬರೆಯಲು ಬರುವುದಿಲ್ಲ.

2. ನನ್ನ ಹೆಸರು ಬಾಹುಕಾನಾ ರಾಜಾರಾಮ ಮುತಗೇಕರ ಎಂದು ಇರುತ್ತದೆ ಎಂದರೆ ಸರಿ . ನಿಪಿಃ 1 ಕ್ಕೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ . ನಿಪಿಃ 1 ರಂತೆ ನಾನು ದಾವಾ ಆಸ್ತಿಯನ್ನು ವಾದಿಗೆ ಮಾರಾಟ ಮಾಡಿರುತ್ತೇನೆ ಎಂದರೆ

ಸರಿ .   ನಿಪಿಃ 1 ರಲ್ಲಿ 4 ವ 5 ನೇ ಪ್ರತಿವಾದಿಯರ ಹೆಸರುಗಳು ನಮೂದು ಇರುವುದಿಲ್ಲ ಎಂದರೆ ಸರಿ .   ವಾದಿ -ಪಾಂಡುರಂಗ ಇವರಿಂದ 21 ಸಾವಿರ ರೂ.ಗಳನ್ನು ಪಡೆದು, ನಾನು ಅವರಿಗೆ ನಿಪಿಃ 1 ರ ಖರೀದಿ ಪತ್ರವನ್ನು ಬರೆದುಕೊಟ್ಟು , ಅವರಿಗೆ ದಾವಾ ಆಸ್ತಿಯ ಕಬ್ಜೆಯನ್ನು ಕೊಟ್ಟಿರುತ್ತೇನೆಂದರೆ ಸರಿ.  4 ವ 5 ನೇ ಪ್ರತಿವಾದಿಯರಿಂದ ನಿಪಿಃ 1 ರ ಖರೀದಿ ಪತ್ರದ ಪ್ರತಿಫಲದ ಹಣವನ್ನು ನಾನು ಪಡೆದಿರುವ ಬಗ್ಗೆ, ಅದರಲ್ಲಿ ನಮೂದು ಇರುವುದಿಲ್ಲ ಎಂದರೆ ಸರಿ.   ಇಲ್ಲಿಯವರೆಗೂ, ವಾದಿಯೇ ದಾವಾ ಆಸ್ತಿಯ ಪ್ರತ್ಯೇಕ ಕಬ್ಜೆಯಲ್ಲಿ ಇರುತ್ತಾರೆ ಎಂದರೆ ಸರಿ.  ದಾವಾ ಆಸ್ತಿಯ ಸಾಗುವಳಿಯನ್ನು ವಾದಿಯೇ ಮಾಡುತ್ತಾ ಬಂದಿರುತ್ತಾರೆಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು, 4 ಜನ ಸಹೋದರರು ಸೇರಿ ಅದರ ಸಾಗುವಳಿ ಮಾಡುತ್ತಿದ್ದಾರೆಂದು ಹೇಳುತ್ತಾರೆ - ಈ ಬಗ್ಗೆ, ನಾನು ಯಾವುದೇ ದಾಖಲೆಯನ್ನು ನೋಡಿರುವುದಿಲ್ಲ.

3.   ನಿಪಿಃ 1 ರ ಅಡಿಯಲ್ಲಿ ದಾವಾ ಆಸ್ತಿಯ ಕಬ್ಜೆಯನ್ನು ಪಡೆದುಕೊಂಡ ನಂತರ ಕೇವಲ ವಾದಿಯೇ ಅದರ ಕಬ್ಜೆಯಲ್ಲಿದ್ದುಕೊಂಡು, ಸಾಗುವಳಿ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾ. ಸಾಕ್ಷಿ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿಯಿದೆ.

Sd/-

1 ನೇ ಹೆಚ್ಚುವರಿ ಸಿವಿಲ್ ನ್ಯಾ. ಹಾಗೂ

ಜೆ ಎಮ್ ಎಫ್ ಸಿ, ಬೆಳಗಾವಿ